2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 165/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಮಮತಾ | ಪಿಡಬ್ಲೂ-1 |
| ಗಂಡನ ಹೆಸರು | - | ಪ್ರಕಾಶ್ | ಸಿಡಬ್ಲೂ -1 |
| ವಯಸ್ಸು | - | 35 ವರ್ಷ | |
| ಉದ್ಯೋಗ | - | ಕೂಲಿ ಕೆಲಸ | |
| ವಾಸ ಸ್ಥಳ | - | ಕಡೂರು | |

ದಿನಾಂಕಃ 22.07.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಪ್ರಕರಣ ದಾಖಲಾದ ಬಳಿಕ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ನಾನು ಕಡೂರು ಪೊಲೀಸ್ ಠಾಣೆಯಲ್ಲಿ ನೋಡಿದ್ದೇನೆ. ಮೃತ ಪ್ರಕಾಶ್ ನನ್ನ ಗಂಡ. ಚಾಸಾ.2 ರಿಂದ ಚಾಸಾ.4 ರವರು ನನಗೆ ಗೊತ್ತಿಲ್ಲ. ಚಾಸಾ.5, ಚಾಸಾ.12, 13 ಮತ್ತು ಚಾಸಾ.14 ರವರು ನನ್ನ ಸಂಬಂಧಿ. ಚಾಸಾ.7 ನನ್ನ ಮಾವ ಅಂದರೆ ನನ್ನ ಗಂಡನ ತಂದೆ. ಚಾಸಾ.8 ನನ್ನ ಅಣ್ಣ. ಚಾಸಾ.9 ನನ್ನ ಪಕ್ಕದ ಮನೆಯವರು. ಚಾಸಾ.12 ನನ್ನ ಭಾವ. ಚಾಸಾ.15 ರಿಂದ 17 ನಮ್ಮ ಊರಿನವರು. ಚಾಸಾ.23 ನನ್ನ ಮಗಳು. ಚಾಸಾ.24 ನನ್ನ ಅತ್ತಿಗೆ ಅಂದರೆ ನನ್ನ ಗಂಡನ ಅಕ್ಕ.
2. ನನಗೆ ಒಟ್ಟು ಇಬ್ಬರು ಮಕ್ಕಳು ಅವರೆಂದರೆ ಚಾಸಾ.23 ಮತ್ತು ಒಬ್ಬ ಮಗ. ಈಗ್ಗೆ 1 ವರ್ಷದ ಹಿಂದೆ ನನ್ನ ಗಂಡನನ್ನು ಕೊಲೆ ಮಾಡಲಾಗಿದೆ. 2006 ನೇ ಇಸವಿಯಲ್ಲಿ ನನ್ನ ಮತ್ತು ನನ್ನ

ಗಂಡನ ಮದುವೆ ನಡೆದಿತ್ತು. ನನ್ನ ಗಂಡ ಬದುಕಿದ್ದ ಸಮಯದಲ್ಲಿ ಅವರು ಆಟೋ ಚಾಲಕನಾಗಿ ಕೆಲಸ ಮಾಡುತ್ತಿದ್ದರು ಮತ್ತು ನಾನು ಮನೆಕೆಲಸಗಳನ್ನು ನೋಡಿಕೊಳ್ಳುತ್ತಿದ್ದೆನು. ನನ್ನ ಗಂಡ ಚಾಲನೆ ಮಾಡುತ್ತಿದ್ದ ಆಟೋ ಆತನ ಸ್ವಂತದ್ದು. ನನ್ನ ಗಂಡನ ಕೊಲೆಯಾಗುವ 5 ತಿಂಗಳ ಹಿಂದೆ ಆತ ಸದರಿ ಆಟೋವನ್ನು ಖರೀದಿಸಿದ್ದರು. ಸದರಿ ಆಟೋ ಸಂಖ್ಯೆ ಕೆ ಎ 66-0586 ಆಗಿರುತ್ತದೆ. ಅದು ನನ್ನ ಗಂಡನ ಹೆಸರಿನಲ್ಲಿಯೇ ಇತ್ತು. ಆಟೋ ಚಾಲನೆ ಮಾಡುವುದರ ಜೊತೆಗೆ ನನ್ನ ಗಂಡ ಬೇರೆಯವರ ಕಾರನ್ನು ಬಾಡಿಗೆಗೆ ಚಾಲನೆ ಮಾಡಲು ಹೋಗುತ್ತಿದ್ದರು. ಯಾರಾದರೂ ಕಾರಿನ ಬಾಡಿಗೆಗೆ ಕರೆದರೆ ನನ್ನ ಗಂಡ ಹೋಗಿ ಬರುತ್ತಿದ್ದರು ಮತ್ತು ಆ ರೀತಿ ಆತ ಹೋದಾಗ ಬರುವುದು ತಡವಾದರೆ ನನಗೆ ಫೋನ್ ಮಾಡಿ ತಿಳಿಸುತ್ತಿದ್ದರು.

3. ದಿನಾಂಕ 14.07.2021 ರಂದು ಮಧ್ಯಾಹ್ನ 2.30 ಗಂಟೆ ಸಮಯದಲ್ಲಿ ನನ್ನ ಗಂಡ ನಮ್ಮ ಮನೆಯಲ್ಲಿ ಊಟ ಮಾಡಿಕೊಂಡು ಮೇಲೆ ತಿಳಿಸಿದ ಆಟೋವನ್ನು ತೆಗೆದುಕೊಂಡು ಹೋದರು. ನಂತರ ರಾತ್ರಿ 10.00 ಗಂಟೆಗೆ ನನ್ನ ಗಂಡ ನನ್ನ ಮೊಬೈಲ್ ಗೆ ಕರೆ ಮಾಡಿ ಆತ ಯಾವುದೋ ಬಾಡಿಗೆ ಬಂದಿರುವುದಾಗಿ ಹೇಳಿ ತಾನು ಕಡೂರು ಚೆಕ್ ಪೋಸ್ಟಿನಲ್ಲಿ ಇರುವುದಾಗಿ ತಿಳಿಸಿ ತಾನು ಬರುವುದು ತಡವಾಗುತ್ತದೆ ನೀವು ಊಟ ಮಾಡಿ ಮಲಗಿ ಎಂದು ತಿಳಿಸಿದ್ದರು. ಆಗ ನಾನು ಮತ್ತು ನನ್ನ ಮಗಳು ಊಟ ಮಾಡಿ ಮನೆಯಲ್ಲಿ ಮಲಗಿದ್ದೆವು. ಆ ದಿನ

ರಾತ್ರಿ ನನ್ನ ಗಂಡ ಮನೆಗೆ ಬರಲಿಲ್ಲ. ನಂತರ ಮಾರನೇ ದಿನ ನನ್ನ ಗಂಡನ ಮೊಬೈಲ್ ಸಂಖ್ಯೆ 7204802739 ಗೆ ಕರೆ ಮಾಡಿದೆನು. ಆದರೆ ಅದು ಸ್ವಿಚ್ ಆಫ್ ಆಗಿತ್ತು. ಆಗ ನಾನು ನನ್ನ ಗಂಡ ಎಲ್ಲಿಯೋ ಆಟೋವನ್ನು ನಿಲ್ಲಿಸಿ ಯಾವುದಾದರೂ ಕಾರಿನ ಬಾಡಿಗೆಗೆ ಹೋಗಿರಬಹುದು ಎಂದು ತಿಳಿದು ಸುಮ್ಮನಾದೆನು. ಆ ದಿನ ಎಷ್ಟು ಬಾರಿ ಕರೆ ಮಾಡಿದರು ನನ್ನ ಗಂಡನ ಮೊಬೈಲ್ ಸ್ವಿಚ್ ಆಫ್ ಎಂದು ಬರುತ್ತಿತ್ತು. ನಂತರ ನಾನು ಆ ದಿನ ಸಂಜೆ ನಮ್ಮ ಸಂಬಂಧಿಕರಿಗೆ ಫೋನ್ ಮಾಡಿ ವಿಚಾರ ತಿಳಿಸಿದೆನು. ನಂತರ ಮಾರನೇ ದಿನ ಅಂದರೆ ದಿನಾಂಕ 16.07.2021 ರಂದು ನಾನು ಮತ್ತು ನನ್ನ ಮಾವ ಸೇರಿಕೊಂಡು ನಮ್ಮ ಊರಾದ ಕಡೂರುಹಳ್ಳಿಯಲ್ಲಿ ಹುಡುಕಾಡಿದೆವು ಮತ್ತು ನನ್ನ ಗಂಡನ ಸ್ನೇಹಿತರನ್ನು ಮತ್ತು ಸಂಬಂಧಿಕರನ್ನು ವಿಚಾರಿಸಿದೆವು. ಆದರೆ ಎಲ್ಲಿಯೂ ಸಹ ನನ್ನ ಗಂಡನ ಮತ್ತು ಆತನ ಆಟೋದ ಪತ್ತೆಯಾಗಲಿಲ್ಲ.

4. ನಂತರ ದಿನಾಂಕ 17.07.2021 ರಂದು ನಾನು ಮತ್ತು ನನ್ನ ಮಾವ ನನ್ನ ಗಂಡ ಕಾಣೆಯಾದ ವಿಚಾರದಲ್ಲಿ ದೂರನ್ನು ನೀಡಲು ಬೆಳಿಗ್ಗೆ 10.00 ಗಂಟೆಗೆ ಕಡೂರು ಪೊಲೀಸ್ ಠಾಣೆಗೆ ಹೋದೆವು. ಆಗ ಅಲ್ಲಿ ಪೊಲೀಸರು ಯಾವುದೋ ಅಪರಿಚಿತ ಗಂಡಸಿನ ಶವ ದೊರಕಿದೆ ಅದನ್ನು ನೋಡಿ ಎಂದು ಸದರಿ ಶವದ ಫೋಟೋವನ್ನು ತೋರಿಸಿದರು. ಸದರಿ ಫೋಟೋವನ್ನು ನೋಡಲಾಗಿ ಅದರಲ್ಲಿದ್ದ ಗಂಡಸಿನ ಶವ ನನ್ನ ಗಂಡ ಪ್ರಕಾಶ್ ರವರದ್ದಾಗಿತ್ತು. ಸದರಿ ಫೋಟೋವನ್ನು ನೋಡಿದರೆ

ಗುರುತಿಸುತ್ತೇನೆ. ಸಾಕ್ಷಿಯು ಒಂದು ಫೋಟೋವನ್ನು ನೋಡಿ ಗುರುತಿಸಿ ಅದೇ ಫೋಟೋವನ್ನು ಆ ದಿನ ಪೊಲೀಸರು ತೋರಿಸಿದ್ದಾಗಿ ನುಡಿದಿರುತ್ತಾರೆ. ಅದರಲ್ಲಿ ನನ್ನ ಗಂಡನ ಶವ ಪೊದೆಯಲ್ಲಿ ಬಿದ್ದಿರುವುದು ಕಂಡು ಬರುತ್ತದೆ. ಸದರಿ ಫೋಟೋವನ್ನು ಸಾಕ್ಷಿ ಗುರುತಿಸಿದ ಮೇರೆಗೆ ಅದನ್ನು ನಿಪಿ.1 ಎಂದು ಗುರುತಿಸಲಾಯಿತು.

5. ಸದರಿ ಶವವನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಾಗಾರದಲ್ಲಿ ಇರಿಸಿರುವುದಾಗಿ ಪೊಲೀಸರು ತಿಳಿಸಿದರು. ನಂತರ ನಾನು, ನನ್ನ ಅಣ್ಣ ಮತ್ತು ನನ್ನ ಮಾವ ಕೂಡಲೇ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ಹೋಗಿ ಅಲ್ಲಿ ನನ್ನ ಗಂಡನ ಶವವನ್ನು ನೋಡಿದೆವು. ನನ್ನ ಗಂಡನ ಮೂಗಿನಲ್ಲಿ ರಕ್ತ ಬಂದು ಗಟ್ಟಿಯಾಗಿತ್ತು, ಆತನ ಎರಡೂ ಕಣ್ಣುಗಳು ಕಪ್ಪಾಗಿದ್ದವು, ಕುತ್ತಿಗೆಯಲ್ಲಿ ಹಗ್ಗದಿಂದ ಬಿಗಿದ ಗುರುತು ಇತ್ತು.

6. ಸಾಕ್ಷಿಯು ಮೂರು ಫೋಟೋಗಳನ್ನು ನೋಡಿ ಗುರುತಿಸಿ ಅವುಗಳಲ್ಲಿ ನಾನು ಆ ದಿನ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶಾವಾಗಾರದಲ್ಲಿ ನೋಡಿದ ನನ್ನ ಗಂಡನ ಮೃತ ದೇಹ ಕಂಡು ಬರುತ್ತದೆ ಎಂದು ನುಡಿದು ಅವುಗಳಲ್ಲಿ ನನ್ನ ಗಂಡನ ಮೈ ಮೇಲೆ ನಾನು ಮೇಲೆ ಹೇಳಿದ ಗಾಯಗಳು ಕಂಡು ಬರುತ್ತವೆ ಎಂದು ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.2 ರಿಂದ ನಿಪಿ.4 ಎಂದು ಗುರುತಿಸಲಾಯಿತು.

7. ಅಲ್ಲಿ ನನ್ನ ಗಂಡನ ಶವವನ್ನು ನೋಡಿಕೊಂಡು ಅದೇ ದಿನ

ನಾವು ಕಡೂರು ಪೊಲೀಸ್ ಠಾಣೆಗೆ ಮಧ್ಯಾಹ್ನ 3.00 ಗಂಟೆಗೆ ವಾಪಾಸ್ಸು ಹೋದೆವು. ಅಲ್ಲಿ ಪೊಲೀಸರನ್ನು ವಿಚಾರಿಸಲಾಗಿ ನನ್ನ ಗಂಡನ ಶವ ದಿನಾಂಕ 15.07.2021 ರಂದು ಸಂಜೆ 5.00 ಗಂಟೆ ಸಮಯದಲ್ಲಿ ಕಡೂರು ತಾಲ್ಲೂಕಿನ ಹೇಮಗಿರಿಯ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಸಮೀಪದಿಂದ ಎಸ್ ಕೋಡಿಹಳ್ಳಿಗೆ ಹೋಗುವ ಠಾರು ರಸ್ತೆಯ ಪಕ್ಕ ಕೆರೆ ಏರಿಯ ಇಳಿಜಾರಿನ ಪೊದೆಯಲ್ಲಿ ದೊರಕಿದ್ದಾಗಿ ತಿಳಿಸಿದರು. ಯಾರೋ ನನ್ನ ಗಂಡನನ್ನು ದಿನಾಂಕ 14.07.2021 ರಂದು ರಾತ್ರಿ 10.00 ಗಂಟೆಯ ನಂತರ ಕೊಲೆ ಮಾಡಿರುವುದಾಗಿ ಪೊಲೀಸರು ತಿಳಿಸಿದರು. ನನ್ನ ಗಂಡನ ಆಟೋ, ಆತ ಬಾಡಿಗೆಗೆ ಆಟೋ ಓಡಿಸಿದ್ದ ಹಣ ಮತ್ತು ಆತನ ಮೊಬೈಲ್ ನನ್ನ ಗಂಡನ ಶವದ ಬಳಿ ಸಿಕ್ಕಿಲ್ಲವೆಂದು ಪೊಲೀಸರು ತಿಳಿಸಿದರು. ನಂತರ ನಾನು ಆ ಬಗ್ಗೆ ನನ್ನ ಗಂಡನ ಕೊಲೆ ಮಾಡಿರುವ ವ್ಯಕ್ತಿಗಳ ವಿರುದ್ಧ ಕ್ರಮ ಜರುಗಿಸುವಂತೆ ಕಡೂರು ಪೊಲೀಸರಿಗೆ ದೂರು ನೀಡಿರುತ್ತೇನೆ.

8. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರನ್ನು ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ದೂರನ್ನು ನಿಪಿ.5 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು.

9. ಸಾಕ್ಷಿಯು ಪ್ರಥಮ ವರ್ತಮಾನ ವರದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.6

ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು.

10. ನನ್ನ ಗಂಡ ದಿನಾಂಕ 14.07.2021 ರಂದು ಮಧ್ಯಾಹ್ನ 2.30 ಗಂಟೆ ಸಮಯದಲ್ಲಿ ನಮ್ಮ ಮನೆಯಿಂದ ತನ್ನ ಆಟೋದಲ್ಲಿ ಹೊರಡುವ ಸಮಯದಲ್ಲಿ ತಿಳಿ ಹಳದಿ ಬಣ್ಣದ ಚೆಕ್ಸ್ ನ ಪೂರ್ತಿ ತೋಳಿನ ಶರ್ಟ್, ಕಂದು ಬಣ್ಣದ ಪ್ಯಾಂಟ್ ಮತ್ತು ಖಾಕಿ ಶರ್ಟ್ ನ್ನು ಧರಿಸಿದ್ದರು. ಆ ದಿನ ನನ್ನ ಗಂಡ ಬಿಳಿ ಬಣ್ಣದ ಬನಿಯನ್ ಮತ್ತು ಕಾಫಿ ಬಣ್ಣದ ಕಾಚಾವನ್ನು ಹಾಕಿಕೊಂಡಿದ್ದರು. ಒಂದು ಕಂದು ಬಣ್ಣದ ಶಾಲ್ ನ್ನು ನನ್ನ ಗಂಡ ರಾತ್ರಿ ಸಮಯದಲ್ಲಿ ಬಾಡಿಗೆಗೆ ಹೋಗಲು ಬೇಕಾಗುತ್ತದೆ ಎಂದು ಸದಾ ಕಾಲ ಆಟೋದಲ್ಲಿಯೇ ಇಟ್ಟುಕೊಳ್ಳುತ್ತಿದ್ದರು. ನನ್ನ ಗಂಡ ಬಲಗೈಗೆ ವನ್ನು ಕಟ್ಟಿಕೊಂಡಿದ್ದರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ.

11. ಒಂದು ತಿಳಿ ಹಳದಿ ಬಿಳಿ ಮತ್ತು ಕಂದು ಬಣ್ಣದ ತುಂಬು ತೋಳಿನ ಶರ್ಟ್, ಕಂದು ಬಣ್ಣದ ಪ್ಯಾಂಟ್, ಕಾಫಿ ಬಣ್ಣದ ಕಾಚಾ, ಬಿಳಿ ಬಣ್ಣದ ಸ್ಯಾಂಡೋ ಬನಿಯನ್ ಇದೆ ಎಂದು ಹೇಳಲಾದ ಪ್ಯಾಕ್ ಮಾಡಿ ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದ ಪ್ಯಾಕೆಟ್ ಗಳನ್ನು ಆರೋಪಿತರ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿ ದಿನಾಂಕ 14.07.2021 ರಂದು ಮಧ್ಯಾಹ್ನ 2.30 ಗಂಟೆ

ಸಮಯದಲ್ಲಿ ನನ್ನ ಗಂಡ ಮನೆಯಲ್ಲಿ ಊಟ ಮಾಡಿಕೊಂಡು ಮನೆಯಿಂದ ಆಟೋದಲ್ಲಿ ಹೊರಟ ಸಮಯದಲ್ಲಿ ಧರಿಸಿದ್ದ ಬಟ್ಟೆಗಳು ಅವೇ ಎಂದು ಗುರುತಿಸಿದ ಮೇರೆಗೆ ಅವುಗಳನ್ನು ಕ್ರಮವಾಗಿ ಮುಮಾ. 1 ರಿಂದ 4 ಎಂದು ಗುರುತಿಸಲಾಯಿತು.

12. ಸಾಕ್ಷಿಯು ಕಪ್ಪು ಮತ್ತು ಕೆಂಪು ಬಣ್ಣದ ದಾರದಲ್ಲಿದ್ದ ತಾಯತವನ್ನು ನೋಡಿ ಗುರುತಿಸಿ ಅದನ್ನು ನನ್ನ ಗಂಡ ತನ್ನ ಬಲಗೈನಲ್ಲಿ ಕಟ್ಟಿಕೊಂಡಿದ್ದಾಗಿ ನುಡಿದಿರುತ್ತಾರೆ. ಅದನ್ನು ಮು.ಮಾ.5 ಎಂದು ಗುರುತಿಸಲಾಯಿತು.

13. ಸಾಕ್ಷಿಯು ಕಂದು ಬಣ್ಣದ ಶಾಲ್ ನ್ನು ನೋಡಿ ಗುರುತಿಸಿ ಅದನ್ನು ನನ್ನ ಗಂಡ ರಾತ್ರಿ ಸಮಯದಲ್ಲಿ ಬಾಡಿಗೆಗೆ ಹೋಗಲು ಬೇಕಾಗುತ್ತದೆ ಎಂದು ಸದಾ ಕಾಲ ಆಟೋದಲ್ಲಿಯೇ ಇಟ್ಟುಕೊಂಡಿದ್ದಾಗಿ ನುಡಿದಿರುತ್ತಾರೆ ಮತ್ತು ಖಾಕಿ ಬಣ್ಣದ ಅರ್ಧ ತೋಳಿನ ಶರ್ಟ್ ನ್ನು ನೋಡಿ ಗುರುತಿಸಿ ಅದನ್ನು ದಿನಾಂಕ 14.07.2021 ರಂದು ಮಧ್ಯಾಹ್ನ 2.30 ಗಂಟೆ ಸಮಯದಲ್ಲಿ ನನ್ನ ಗಂಡ ಮನೆಯಲ್ಲಿ ಊಟ ಮಾಡಿಕೊಂಡು ಮನೆಯಿಂದ ಆಟೋದಲ್ಲಿ ಹೊರಟ ಸಮಯದಲ್ಲಿ ಧರಿಸಿದ್ದಾಗಿ ನುಡಿದಿರುತ್ತಾರೆ. ಅವುಗಳನ್ನು ಕ್ರಮವಾಗಿ ಮುಮಾ.6 ಮತ್ತು 7 ಎಂದು ಗುರುತಿಸಲಾಯಿತು.

14. ಸಾಕ್ಷಿಯು ಒಂದು ಹಸಿರು ಬಣ್ಣದ ಟಿ ಶರ್ಟ್ ನ್ನು ನೋಡಿ ಗುರುತಿಸಿ ಅದನ್ನು ನನ್ನ ಗಂಡ ಆಟೋವನ್ನು ಸ್ವಚ್ಛಗೊಳಿಸಲು ಇಟ್ಟುಕೊಂಡಿದ್ದಾಗಿ ನುಡಿದಿರುತ್ತಾರೆ. ಅದನ್ನು ಮು.ಮಾ.8

ಎಂದು ಗುರುತಿಸಲಾಯಿತು. ನನ್ನ ಗಂಡ ಒಂದು ಹಳದಿ ಬಣ್ಣದ ಪ್ಲಾಸ್ಟಿಕ್ ಹಗ್ಗವನ್ನು ಲಗೇಜ್ ನ್ನು ಕಟ್ಟಿಕೊಳ್ಳಲು ಬೇಕಾಗುತ್ತದೆ ಎಂದು ತನ್ನ ಆಟೋದಲ್ಲಿ ಇಟ್ಟುಕೊಂಡಿದ್ದರು. ಸದರಿ ಹಗ್ಗವನ್ನು ನೋಡಿದರೆ ಗುರುತಿಸುತ್ತೇನೆ. ಪ್ಲಾಸ್ಟಿಕ್ ಹಗ್ಗ ಇದೆ ಎಂದು ಹೇಳಲಾದ ಬಿಳಿ ಬಟ್ಟೆಯಲ್ಲಿ ಅರಗು ಮಾಡಿ ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದ ಪ್ಯಾಕೆಟ್ ನ್ನು ಆರೋಪಿತರ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಕಿರು ಬೆರಳು ಗಾತ್ರಕ್ಕಿಂತ ಸ್ವಲ್ಪ ಚಿಕ್ಕದಾದ ಹಳದಿ ಬಣ್ಣದ ಪ್ಲಾಸ್ಟಿಕ್ ಹಗ್ಗವನ್ನು ನೋಡಿ ಗುರುತಿಸಿ ನನ್ನ ಗಂಡ ಆಟೋದಲ್ಲಿ ಲಗೇಜು ಕಟ್ಟಲು ಇಟ್ಟುಕೊಂಡಿದ್ದ ಹಗ್ಗ ಅದೇ ಎಂದು ಗುರುತಿಸಿದ ಮೇರೆಗೆ ಅದನ್ನು ಮು.ಮಾ.9 ಎಂದು ಗುರುತಿಸಲಾಯಿತು.

15. ನನ್ನ ಗಂಡನ ಆಟೋವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಗಂಡನ ಕೆ ಎ 66-0586 ನೋಂದಣಿ ಸಂಖ್ಯೆಯುಳ್ಳ ಆಟೋ ಕಂಡು ಬರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಫೋಟೋವನ್ನು ನಿಪಿ.7 ಎಂದು ಗುರುತಿಸಲಾಯಿತು. ಸದರಿ ಆಟೋವನ್ನು ನಾನು ನ್ಯಾಯಾಲಯದ ಆದೇಶದ ಮೇರೆಗೆ ನಮ್ಮ ವಶಕ್ಕೆ ಪಡೆದುಕೊಂಡಿದ್ದೇನೆ.

16. ನಂತರ ದಿನಾಂಕ 21.07.2021 ರಂದು ಕಡೂರು ಪೊಲೀಸ್ ಠಾಣೆಯ ಇನ್ಸ್ ಪೆಕ್ಟರ್ ಕರೆ ಮಾಡಿ ನನ್ನನ್ನು

ಪೊಲೀಸ್ ಠಾಣೆಗೆ ಬರುವಂತೆ ತಿಳಿಸಿದ್ದರು. ಅದರಂತೆ ನಾನು ಆ ದಿನ ಸದರಿ ಪೊಲೀಸ್ ಠಾಣೆಗೆ ಹೋಗಿದ್ದೆನು. ಆಗ ನನ್ನ ಗಂಡನ ಆಟೋವನ್ನು ಕಳ್ಳತನ ಮಾಡುವ ಸಲುವಾಗಿ ದಿನಾಂಕ 14.07.2021 ರಂದು ರಾತ್ರಿ 9.30 ಗಂಟೆಗೆ ಚಿಕ್ಕಮಗಳೂರಿನ ಶಬ್ಬೀರ್ ಮತ್ತು ಮೊಹಮದ್ ಸುಬಾನ್ ಎನ್ನುವವರು ನನ್ನ ಗಂಡನ ಆಟೋವನ್ನು ಬಾಡಿಗೆಗೆ ಎಂದು ಹೇಳಿ ಆತನ ಆಟೋವನ್ನು ಕಡೂರಿನ ಹೌಸಿಂಗ್ ಬೋರ್ಡ್ ಬಳಿ ಕರೆದುಕೊಂಡು ಹೋಗಿ ಅಲ್ಲಿ ಡ್ರಿಂಕ್ಸ್ ಮಾಡೋಣ ಬಾ ಎಂದು ಹೇಳಿ ಆಟೋವನ್ನು ನಿಲ್ಲಿಸಿ ನನ್ನ ಗಂಡ ಡ್ರಿಂಕ್ಸ್ ಮಾಡುತ್ತಿದ್ದ ಸಮಯದಲ್ಲಿ ಅವರು ನನ್ನ ಗಂಡನ ಕುತ್ತಿಗೆಯನ್ನು ಹಗ್ಗದಿಂದ ಬಿಗಿದು, ಕೊಲೆ ಮಾಡಿ ನಂತರ ಅದೇ ಆಟೋದಲ್ಲಿ ನನ್ನ ಗಂಡನ ಶವವನ್ನು ಹಾಕಿ, ಆಟೋವನ್ನು ಹೇಮಗಿರಿ ದೇವಸ್ಥಾನದ ಹತ್ತಿರ ಎಸ್ ಕೋಡಿಹಳ್ಳಿಗೆ ಹೋಗುವ ರಸ್ತೆಯ ಪಕ್ಕದಲ್ಲಿ ಕೆರೆ ಏರಿಯ ಇಳಿ ಜಾರಿನಲ್ಲಿ ಎಸೆದು ನನ್ನ ಗಂಡನ ಆಟೋ, ಮೊಬೈಲ್ ಮತ್ತು ಆತನ ಬಳಿ ಇದ್ದ ರೂ.1,600/- ಹಣವನ್ನು ನನ್ನ ಗಂಡನನ್ನು ಕೊಲೆ ಮಾಡಿದ ಆರೋಪಿಗಳು ತೆಗೆದುಕೊಂಡು ಹೋಗಿರುವುದಾಗಿ ಆರೋಪಿತರು ಅವರ ಬಳಿ ಹೇಳಿರುವುದಾಗಿ ತಿಳಿಸಿದರು.

17. ನಾನು ಮೇಲೆ ಹೇಳಿದ ನನ್ನ ಗಂಡನ ಮೊಬೈಲ್ ಸಿಮ್ ಸಂಖ್ಯೆಯಾದ 7204802739 ಅದೇ ದಿನ ಅಂದರೆ ದಿನಾಂಕ 14.07.2021 ರಂದು ಮಧ್ಯಾಹ್ನ ಖರೀದಿ ಮಾಡಿದ್ದಾಗಿ ನನ್ನ ಗಂಡ ನನಗೆ ಕರೆ ಮಾಡಿ ತಿಳಿಸಿದ್ದರು.

**(ಪಾಟೀ ಸವಾಲು: ಆರೋಪಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಾಕ್ಷಿಯ ಪಾಟೀ ಸವಾಲನ್ನು ರೂ.500/- ಖರ್ಚಿನೊಂದಿಗೆ ಮುಂದೂಡಲಾಯಿತು.)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.